1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 354 /2019 **ಚಾಸಾಃ( 2 ) ಪ್ರಾಸಾ (2 )**

**ದಿನಾಂಕಃ 22-04-2026 ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | ರವಿಕುಮಾರ |
| ತಂದೆ ಹೆಸರು | ಕನಕಪ್ಪ ವಾಲೀಕಾರ |
| ವಯಸ್ಸು | 25 ವರ್ಷ, |
| ಉದ್ಯೋಗ | ಗೌಂಡಿ ಕೆಲಸ |
| ವಾಸಸ್ಥಳ | ಕೊಪ್ಪಳ |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

ದಿನಾಂಕಃ 16-9-2019 ರಂದು ಬೆಳಗಿನ ಜಾವ 6-30 ಒಂದ ಸರ್ಕಾರಿ ಬಸ್ಸು ಅಭಯ ಸಾಲ್ವಂಟ ಹತ್ತಿರ ಒಂದು ಮರಕ್ಕೆ ಡಿಕ್ಕಿ ಪಡಿಸಿ ಅಪಘಾತವಾದ ಹಿನ್ನೆಲೆಯಲ್ಲಿ ಬೆಳಿಗ್ಗೆ 11 ರಿಂದ 12 ರ ಅವಧಿಯಲ್ಲಿ ನಾನು ಮತು ಚಾಸಾ-3 ರವರು ಕೆಲಸಕ್ಕೆ ಹೋಗಿತ್ತಿದ್ದಾಗ ನಮ್ಮನ್ನು ಕರೆದು ನಮ್ಮ ಸಮಕ್ಷಮ ಪೋಲೀಸರು ಸ್ಥಳ ಪಂಚನಾಮೆ ಮಾಡಿರುತ್ತಾರೆ. ಸದರಿ ಘಟನಾ ಸ್ಥಳವನ್ನು ನಿಂಗಪ್ಪ ಸಿದ್ದಪ್ಪ ಹಾದಿಮನಿ ರವರು ತೋರಿಸಿರುತ್ತಾರೆ. ಸಾಕ್ಷಿ ತನ್ನ ಸಮಕ್ಷಮ ಮಾಡಿರುವ ಪಂಚನಾಮೆ ಮತ್ತು ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿ ಸಹಿ ನಿಪಿ-2(ಎ) ಎಂದು ಗುರುತಿಸಲಾಯಿತು. ಘಟನಾ ಸ್ಥಳದಲಿ ಅಪಘಾತ ಪಡಿಸಿದ ಸರ್ಕಾರಿ ಬಸ್ಸು ನಿಂತಿದ್ದು ಸದರಿ ಬಸ್ಸನ್ನು ಪೋಲೀಸರು ಅಮಾನತ್ತು ಪಡಿಸಿಕೊಂಡಿರುತಾರೆ. ಸದರಿ ಘಟನಾ ಸ್ಥ ಳದ ಪೂಃ ಹೊಸಪೇಟೆ ರಸ್ತೆ, ಪಃ ಕೊಪ್ಪಳ ರಸ್ತೆ, ದಃ ಖಾಲಿ ಜಾಗ, ಉಃ ಅಭಯ ಸಾಲ್ವೆಂಟ ಇರುತದೆ. ಅಪಘಾತಪಡಿಸಿದ ಬಸ್ಸನ ನಂ. ಕೆಎ-37/ಎಫ-0804 ಆಗಿತ್ತು. ನಿಪಿ-2 ನ್ನು ಘಟನಾ ಸ್ಥಳಲ್ಲಿ ಬರೆದಿದ್ದು ನಾನು ಅಲ್ಲಿಯೇ ಸಹಿ ಮಾಡಿರುತೇನೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

ನನ್ನ ಊರು ಹನಕುಂಟಿಯಾಗಿದ್ದು ನಾನು ತಾತ್ಕಾಲಿಕವಾಗಿ ಕಳೆದ 8 ವರ್ಷಗಳಿಂದ ಕೊಪಳದ ಕುವೆಂಪು ನಗರದಲ್ಲಿವಾಸವಾಗಿದ್ದೇನೆ. ನಾನು ಗೌಂಡಿ ಕೆಲಸ ಮಾಡುತ್ತೇನೆ. ಗೌಂಡ ಕೆಲಸವನ್ನುನಾನು ಕೊಪ್ಪಳ ಮತು ಹಳ್ಳಿಗಳಲ್ಲಿ ಸಹ ಮಾಡುತ್ತೇನೆ. ಘಟನಾ ರಸ್ತೆಯಲ್ಲಿ ನಾನು ಪ್ರತಿದಿನ ಓಡಾಡುತ್ತೇನೆಂದರೆ ಸರಿ. ನಿಪಿ-2 ರ ಸಾರಾಂಶ ನನಗೆ ಗೊತ್ತಿದೆ ಅದನ್ನು ತಿಳಿದುಕೊಂಡೇ ನಾನು ಸಹಿ ಮಾಡಿರುತ್ತೇನೆ. ನಿಪಿ-2 ನ್ನು ತಯಾರಿಸಲು ನಿಂಗಪ್ಪ ಸಿದ್ದಪ್ಪ ಹಾದಿಮನಿ ರವರು ಮಾಹಿತಿ ನೀಡಿರುತ್ತಾರೆ. ದಿಃ 16-9-2018 ರಂದು ನಾನು ಗೌಂಡಿ ಕೆಲಸಕ್ಕೆ ಹೋಗುತ್ತಿದ್ದೆ. ಸದರಿ ದಿನ ಸರ್ಕಾರಿ ಕೆಸಲದ ನಿಮಿತ್ಯ ಹೊಸಳ್ಳಿಗೆ ಕಾಂಕ್ರೀಟ ಹಾಕಲು ರಸ್ತೆ ಬದಿ ಸಿಸಿ ರಸ್ತೆ ಕೆಲಸಕ್ಕೆ ಹೋಗಿದ್ದೆ. ಕಾಂಟ್ರಾಕ್ಟರ ಹೆಸರು ಗೊತ್ತಿಲ್ಲ. ಸದರಿ ನಾನು ಹೊಸಳ್ಳಿಗೆ ಕಾಂಕ್ರೀಟ ಕೆಲಸಕ್ಕೆ ಹೋಗಿಲ್ಲ ಅಂದರೆ ಸರಿಯಲ್ಲ. ಅಪಘಾತ ಹೇಗೆ ಅಗಿದೆ ಗೊತ್ತಿಲ್ಲ ಆದರೆ ಸ್ಥಳದಲ್ಲಿ ಒಂದು ಸರ್ಕಾರಿ ಬಸ್ಸು ನಿಂತಿತ್ತು, ಚಾಸಾ-3 ನನ್ನ ಸ್ನೇಹಿತ ಆತ ಪೆಂಟಿಂಗ ಕೆಲಸ ಮಾಡುತ್ತಾನೆ. ಚಾಸಾ-3 ರವರು ಘಟನೆ ಆದ ಸಮಯದಲ್ಲಿ ಐ ಟಿ ಐ ಓದುತ್ತಿದರು ಈಗ ಪೇಂಟಿಂಗ ಕೆಲಸ ಮಾಡುತ್ತಿದ್ದಾರೆ. ಅಪಘಾತಪಡಿಸಿದ ಬಸ್ಸನ ಸಂಖ್ಯೆಯನ್ನು ಪೋಲೀಸರು ಹೇಳಿದ ಮೇಲೆ

ಗೊತ್ತಾಗಿದೆ ಅಂದರೆ ಸರಿಯಲ್ಲ. ಈ ಮುಂಚೆ 2 ಬಾರಿ ನ್ಯಾಯಾಲಯಕ್ಕೆ ಬಂದಾಗ ಅಪಘಾತಪಡಿಸಿದ ಬಸ್ಸಿನ ಸಂಖ್ಯೇ ಗೊತ್ತಾಗಿದೆ ಅಂದರೆ ಸರಿ. ಸದರಿ ದಿನ ನಾನು ಯಾವುದೇ ಕಾರಣಕ್ಕೂ ಹೊಸಪೇಟೆಗೆ ಕೆಲಸಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಕೋರಿಕೆ ಮೇರೆಗೆ ನಾನು ನಿಪಿ-2 ಕ್ಕೆ ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ನಿಪಿ-2 ಕ್ಕೆ ನಾನು, ಚಾಸಾ-2 ಮತು ನಿಂಗಪ್ಪ ಸಹಿ ಮಾಡಿರುತ್ತೇವೆ. ನಾನು ಹೇಳಿದ ಚಕ್ಕಬಂದಿ ಯಾವುದೇ ಗಿಡ ಮತ್ತು ಕಂಬ ಇಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಮಾಹಿತಿ ಇಲ್ಲ ಅದರೂ ಸಹ ಪೋಲೀಸರ ಮಾತುಕೇಳಿ ಸುಳ್ಳು ಸಾಕ್ಷ ಹೇಳುತ್ತಿದ್ದನೆಂದರೆ ಸರಿಯಲ್ಲ. ಆರೋಪಿ ಯಾವುದೇ ಅಪಘಾತ ಮಾಡದಿದ್ದರೂ ಸಹ ಆತನ ವಿರುದ್ದ ಸುಳ್ಳು ಸಾಕ್ಷ ನುಯುತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

**1 ನೇ ಹೆ. ಜೆ ಎಂ ಎಫ್ ಸಿ ಕೊಪ್ಪಳ.**